ಓ.ಎಸ್.ನಂ.122/2022
ಡಿಡಬ್ಲೂ 1

**(ಇಂದು ದಿಃ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಪಾಟೀ ಸವಾಲು ಃ- ಶ್ರೀ ಬಿ.ಎ.ಡಿ. ವಕೀಲರಿಂದ ವಾದಿ ಪರ ಃ-

ನಾನು ನನ್ನ ಹೆಸರಿನಲ್ಲಿ ಕನ್ನಡ ಭಾಷೆಯಲ್ಲಿ ಸಹಿ ಮಾಡಬಲ್ಲೆ ಎಂದರೆ ಸರಿ. ನನ್ನ ಸಹಿಯನ್ನು ನನಗೆ ತೋರಿಸಿದರೆ ನಾನು ಗುರುತಿಸಬಲ್ಲೆ. ಸಾಕ್ಷಿಗೆ ಪ್ರತಿವಾದಿಯ ಪರವಾಗಿ ಸಲ್ಲಿಸಲಾದ ಪ್ರತಿವಾದ ಪತ್ರವನ್ನು ತೋರಿಸಲಾಗಿ ಅದರಲ್ಲಿ ಕನ್ನಡ ಭಾಷೆಯಲ್ಲಿ ನಮೂದಿಸಿದ ಸಹಿ ತನ್ನದು ಎಂದು ಸಾಕ್ಷಿಯು ಗುರುತಿಸುತ್ತಾರೆ. ಸಾಕ್ಷಿಗೆ ಒಂದು ಅಂಚೆ ಹಿಂಬರಹವನ್ನು ತೋರಿಸಲಾಗಿ ಅದರಲ್ಲಿ ಅನುಕ್ರಮ 1ರಲ್ಲಿ ಇರುವ ಸಹಿ ತನ್ನದು ಎಂದು ಸಾಕ್ಷಿಯು ಗುರುತಿಸುತ್ತಾರೆ. ಸದರಿ ಹಿಂಬರಹವನ್ನು ನಿಪಿ-22 ಎಂದು ಗುರುತಿಸಲಾಯಿತು. ನನ್ನ ಮತ್ತು ವಾದಿಯ ಅನ್ಯೂನ್ಯ ಸಂಬಂಧ ಇತ್ತು ಅದೇ ರೀತಿ ನಮ್ಮ ಮಧ್ಯ ವ್ಯವಹಾರವು ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಸಾಲವನ್ನು ಪಡೆದಿದ್ದು ಕ್ರಯದ ಕರಾರು ಬರೆದು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ-2ರಂತೆ ಇರುವ ವ್ಯವಹಾರದ ಹಣ ನಿಪಿ-2 ನೋಂದಣಿಯಾಗುವುದಕ್ಕಿಂತ ಮುಂಚೆ ವಾದಿಯು ನನಗೆ ನನ್ನ ಮನೆಯಲ್ಲಿ ಕ್ರಯದ ಹಣವನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ನಿಪಿ-2 ನೋಂದಣಿಯಾದ 2 ತಿಂಗಳ ನಂತರ ಹಣ ನೀಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-2ಕ್ಕೆ ಸಹಿ ಮಾಡಿದ ಗುಂಡಪ್ಪ ರಮಣ, ಸುದಾಮ ಧನ್ನಿ,

ಪಾಂಡುರಂಗ ಮಾಹಿನ ಮತ್ತು ಶಿವಶರಣಪ್ಪ ಕಡೋಲಿ ರವರು ನನಗೆ ಪರಿಚಯ ಎಂದರೆ ಸರಿ. ಸದರಿ 4 ಜನರ ಸಮಕ್ಷಮ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನಾನು ವಾದಿಯ ಪರವಾಗಿ ಕಾಗದವನ್ನು ನೋಂದಣಿ ಮಾಡಿ ನೀಡಿದ್ದೇನೆ ಎಂದರೆ ಸರಿ. ನಾನು ಸದರಿ ಸಾಕ್ಷಿದಾರರ ಸಮಕ್ಷಮ ವಾದಿಯ ಪರವಾಗಿ ಒಂದೇ ಕಾಗದವನ್ನು ನೋಂದಣಿ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಕಾಗದವನ್ನು ಬರೆದುಕೊಟ್ಟ  ನಂತರ ನನಗೆ ವಾದಿಯ ಮೇಲೆ ಸಂಶಯ ಬರಲಿಲ್ಲ ಎಂದರೆ ಸಾಕ್ಷಿಯು 2 ವರ್ಷಗಳ ನಂತರ ನಾನು ಹಣವನ್ನು ಮರಳಿ ನೀಡಲು ಹೋದಾಗ ವಾದಿಯು ಪಡೆಯಲಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಹಣವನ್ನು ನೀಡಲು ನಾನು ಒಬ್ಬಳೇ ಹೋಗಿದ್ದೇನು. ವಾದಿಯು ಹಣ ಪಡೆಯದೇ ಇರುವಾಗ ಸದರಿ ಹಣ ಪಡೆಯಲು ನಿರ್ದೇಶನ ಕೋರಿ ವಾದಿಯ ವಿರುದ್ಧ ನಾನು ಯಾವುದೇ ದಾವೆಯನ್ನು ಸಲ್ಲಿಸಿಲ್ಲ. ಸಾಕ್ಷಿಯು ಮುಂದುವರೆದು ವಾದಿಯೇ ನನ್ನ ವಿರುದ್ಧ ದಾವೆ ಸಲ್ಲಿಸಿದ್ದಾನೆ ಎಂದು ನುಡಿಯುತ್ತಾರೆ. ವಾದಿಯು ನನಗೆ ಮೋಸ ಮಾಡಿದ್ದಾನೆ ಎಂದು ವಾದಿಯ ವಿರುದ್ಧ ಮತ್ತು ನಿಪಿ-2ಕ್ಕೆ ಸಹಿ ಮಾಡಿದ ಸಾಕ್ಷಿದಾರರ ವಿರುದ್ಧ ಪೊಲೀಸ್ ಪ್ರಕರಣ ದಾಖಲು ಮಾಡಿರುವುದಿಲ್ಲ. ಅದೇ ರೀತಿ ನಾನು ವಾದಿಗೆ ಹಣವನ್ನು ಮರಳಿ ನೀಡಲು ಯಾವುದೇ ವಕೀಲರ ಬಳಿ ಹೋಗಿರುವುದಿಲ್ಲ. ನಾನು ವಾದಿಗೆ ಶ್ರೀ ಭೋಸಗೆ ವಕೀಲರ ಮುಖಾಂತರ ನೋಟೀಸ್‌ನ್ನು ನೀಡಿರುವುದಿಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದ ಸಂಗತಿಗಳು ನನಗೆ ತಿಳಿದಿರುವುದಿಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದ ಸಂಗತಿಗಳನ್ನು ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಲಿಲ್ಲ. ನನ್ನ ಪರವಾಗಿ ನನ್ನನ್ನು ಹೊರತುಪಡಿಸಿ ಬೇರಾರು ಸಾಕ್ಷಿದಾರರು ಇರುವುದಿಲ್ಲ. ವಾದಿಯು ನನಗೆ ಮೋಸ ವಾಡಿ ದಾಖಲೆ ಮಾಡಿಸಿಕೊಂಡಿದ್ದಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪರವಾಗಿ ಬರೆದುಕೊಟ್ಟ ದಾಖಲೆಯಂತೆ ಕ್ರಯ ಪತ್ರ ಮಾಡಿಕೊಡದಿರಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.